ನೀರುಳ್ಳಿಯ ಘಮಘಮ ಪಲ್ಯ. ಖಾರದ ಚಟ್ನಿ. "ಅಷ್ಟು ಬೇಗ ಹೇಗೆ ಮಾಡ್ದಿ ಮಾರಾಯ್ತೀ?" ನಕುಲ ಲೋಕಾರೂಢಿಗೆ ಕೇಳಿದರೂ ಶ್ರಾವಂತಿಯ ಮನದೊಳಗೆ ಚಿಟುಕುಮುಳ್ಳು ಆಡಿಸಿದಂತಾಗುತ್ತಿತ್ತು. ಕೇತಕಿ ಬಂದಳು ಅಂದರೆ ಅಡುಗೆಮನೆಯ ಸಕಲ ಕೆಲಸಕಾರ್ಯಗಳೂ ಅವಳ ಹಕ್ಕು. ಹೀಗೆ ಅವಳಿಗೆ ಯಜಮಾನಿಕೆ ಕೊಡಬಾರದು ಎಂದು ಶ್ರಾವಂತಿ ತೀರ್ಮಾನಿಸಿದರೂ ಅದನ್ನು ಕಾರ್ಯರೂಪಕ್ಕೆ ತರಲಾಗದ ಸೋಂಭೇರಿತನ ಅಮರಿಕೊಂಡು, ಎರಡು ತಿಂಗಳ ಮಟ್ಟಿಗಾದರೂ ಅಡುಗೆಮನೆಯಿಂದ ಮುಕ್ತಿ ಸಿಕ್ಕಿದ ನಿರುಮ್ಮಳದಲ್ಲಿ ಅವಳು ಬೆಳಿಗ್ಗೆ ನಿಧಾನವಾಗಿ ಎದ್ದು ಸಿದ್ಧತೆ ನಡೆಸಿ, ಹಾ, ಇಂತವಳೊಬ್ಬ ಪರಿಚಾರಿಕೆ ಸಿಕ್ಕಿದರೆ ಅದರ ಗಮ್ಮತ್ತೇ ಬೇರೆ ಅನಿಸುತ್ತಿತ್ತು. ಕೇತಕಿಯ ಇರವನ್ನು ಏಕಕಾಲದಲ್ಲಿ ಪ್ರತಿರೋಧಿಸುತ್ತಾ, ಹಾಗೂ ನೆಮ್ಮದಿಯ ಭಾವ ಅನುಭವಿಸುತ್ತಾ, ಅವಳಿರುವಷ್ಟು ದಿನ ಸದಾ ಒಂದು ದ್ವಂದ್ವದಲ್ಲಿರುವಂತೆ ಕಾಲ ಹಾಕುತ್ತಿದ್ದಳು ಶ್ರಾವಂತಿ. ಒಮ್ಮೊಮ್ಮೆ ಒಂದು ಭಾವನೆ ಮೇಲುಗೈಯಾಗುತ್ತಾ. ಸಂಜೆ ಮನೆಗೆ ಬಂದರೆ ಮನೆ ತುಂಬಾ ಇಡುಗಿರುತ್ತಿದ್ದ ಎಣ್ಣೆಯ ಘಮಲು. ಗೋಳಿಬಜೆ, ಬೋಂಡ, ಬಜ್ಜಿ ಇತ್ಯಾದಿಗಳ ಸಮಾರಾಧನೆ. ಟೀವಿಯ ಮುಂದೆ ಕೂತಿರುತ್ತಿದ್ದ ಕೇತಕಿಯ ಮಗ ಪ್ರಥ್ವಿ, ಇವಳ ಮಗ ಕರ್ಣ ತಮ್ಮೆದುರಿನ ಟೀಪಾಯಿಯ ಮೇಲಿನ ತಟ್ಟೆಗೆ ಬೀಳುತ್ತಿದ್ದ ತಿಂಡಿಯ ಪ್ರಮಾಣ ಗಮನಿಸದೆ ತಿನ್ನುವ ಸೊಗಸು. ಎಳೆಯರಾದ ಅವರು ಮಾತ್ರವಲ್ಲ, ಬುದ್ಧಿ ಬೆಳೆದ ನಕುಲನೂ.

'ತಿನ್ನು, ತಿನ್ನು. ಅದೆಷ್ಟು ತಿಂತೀಯೋ ಈಗ್ಲೇ ತಿಂದುಬಿಡು...' ಎನ್ನುವಂತೆ ಅವನನ್ನೊಮ್ಮೆ ಉರಿನೋಟದಿಂದ ದಿಟ್ಟಿಸಿ, ಹಾಗೆ ದಿಟ್ಟಿಸಿದ್ದು ಕೇತಕಿಗೆ ಗೊತ್ತಾಗಬಾರದೆಂಬ ಜಾಗ್ರತೆಯನ್ನೂ ವಹಿಸಿ, ತಾನು ಮಾತ್ರಾ ಕರಿದ ತಿಂಡಿಗಳನ್ನು ಕಿರುಬೆರಳಲ್ಲೂ ಸೋಕುವುದಿಲ್ಲ ಎನ್ನುವ ನಿಶ್ಚಯ ಕೇತಕಿಯ ಒತ್ತಾಯದ ಎದುರು ತಲೆ ಮರೆಸಿಕೊಳ್ಳುತ್ತಿತ್ತು. ಒಂದು, ಇನ್ನೊಂದು, ಮತ್ತೊಂದು ಎಂದು ತಟ್ಟೆಯಲ್ಲಿದ್ದಿದ್ದು ಖಾಲಿಯಾಗುತ್ತಿತ್ತು. ಬಲವಂತವಾಗಿ ಆವಾಹಿಸಿಕೊಂಡು ರೂಢಿಸಿಕೊಂಡಿದ್ದ ನಿಗ್ರಹ ನಾಲಿಗೆರುಚಿಯೆದುರು ಸೋತು ಹೋಗುತ್ತಿತ್ತು. 'ಇರಲಿ, ಇವಳು ಹೊರಟು ಹೋದಮೇಲೆ ಕಟ್ಟುನಿಟ್ಟಾಗಿರುವುದು ಹೇಗೆಂದು ನನಗೆ ಗೊತ್ತಿದೆ' ಎನ್ನುವ ದೂರಾಲೋಚನೆಯಲ್ಲಿ ತನ್ನ ನಿಯಮ ಮುರಿಯುತ್ತಿದ್ದಳು ಶ್ರಾವಂತಿ. 'ಏನು ತಿಂಡಿ? ಏನು ಅಡಿಗೆ?' ಎಂದು ನಕುಲನನ್ನು ವಿಚಾರಿಸಿಕೊಂಡು ಅವನಿಗೆ ಇಷ್ಟವಾದ್ದನ್ನು ಅಟ್ಟು ಬಡಿಸುವ ಕೇತಕಿ ಶ್ರಾವಂತಿಗೆ ಇರಿಸುಮುರಿಸಾಗಿ ಕಾಡುತ್ತಿದ್ದಳು. ಅಡುಗೆ, ತಿಂಡಿ, ಊಟಗಳನ್ನು ಹೊರತುಪಡಿಸಿ ಮತ್ತೊಂದು ಜಗತ್ತು ಇಲ್ಲವೆಂಬಂತೆ ಅದರಲ್ಲೇ ಧನ್ಯತೆ ಅನುಭವಿಸುತ್ತಿದ್ದ ಕೇತಕಿ ಅವಳಿಗೊಂದು ಒಗಟು. 'ಹೀಗಿರುವುದೂ ಒಂದು ಬದುಕೇ?' ಎನ್ನುವ ತನಗೂ, 'ಹೀಗಿರುವುದೇ ಬದುಕು' ಎಂದುಕೊಂಡಿರುವ ಕೇತಕಿಯ ಸ್ವಭಾವಕ್ಕೂ ಅಜಗಜಾಂತರ. ಅದಲ್ಲ ಕಾಡುತ್ತಿದ್ದದ್ದು, ನಕುಲನಿಗೆ ಲಕ್ಷಗಟ್ಟಲೆ ದುಡಿದು ತರುವ ತನಗಿಂತಲೂ ಅವನ ಇಷ್ಟಾನಿಷ್ಟಗಳನ್ನು ಗಮನಿಸುವ, ಪೂರೈಸುವ ಕೇತಕಿಯೇ ಹಿತವಾಗಿ ಕಾಣುತ್ತಾಳೆಂಬ ಸಂಶಯ ಅವಳ ಅಹಂ ಅನ್ನು ಕೆಣಕುತ್ತಿತ್ತು. ಕೆರಳಿಸುತ್ತಿತ್ತು. ಕೊನೆಗೂ ಗಂಡಸೊಬ್ಬನಿಗೆ ಬೇಕಾಗಿರುವುದೇನು? ಅವನಿಗೆ ಹೆಗಲೆಣೆಯಾಗಿ ನಿಂತು ಸಂಸಾರದ ಭಾರವನ್ನು ಸರಿದೂಗಿಸುವ ಹೆಣ್ಣೇ ಅಥವಾ ಅವನನ್ನು ಓಲೈಸಿಕೊಂಡು ಅವನ ಅಗತ್ಯಗಳನ್ನು ಪೂರೈಸುವ ಹೆಣ್ಣೇ ಎಂದು ಯೋಚಿಸ ಹೊರಟರೆ ತಕ್ಕಡಿಯ ತಟ್ಟೆ ವಾಲುತ್ತಿದ್ದದ್ದು ಅನುಸರಿಸಿಕೊಂಡು ಹೋಗುವ ಗೃಹಿಣಿಯ ಕಡೆಗೆ ಎಂದು ಶ್ರಾವಂತಿಯ ಅನಿಸಿಕೆ. ಅನುಮಾನ. ದುಡಿದು ತರುವ ಹೆಣ್ಣು ಬೇಡವೆಂದೇನಲ್ಲ, ಜೊತೆಗೆ ಚಾಚೂ ಕುಂದು ಬರದಂತೆ ಗಂಡನ